# ECHO OF HIS CALL

## ಕರೆಯ ಪ್ರತಿಧ್ವನಿ

**KANNADA**

1969 to 2029 ECHO OF HIS CALL SINCE 1969

*India's National Spiritual Newspaper* ₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXVIII** YEAR OF OUR LORD JESUS CHRIST, 2026 AUGUST **No.07**


## ಪರಿಶುದ್ಧ ಸತ್ಯವೇದ

ದಯವಿಟ್ಟು ಈ ಕೆಳಗಿನ ವಚನಗಳನ್ನು **ಕಂಠಪಾಠ ಮಾಡಿರಿ.**

### ಕೀರ್ತನೆ 136:1-10

1. ಯೆಹೋವನಿಗೆ ಕೃತಜ್ಞತಾ ಸ್ತುತಿ ಮಾಡಿರಿ; ಆತನು ಒಳ್ಳೆಯವನು. ಆತನ ಕೃಪೆಯು ಶಾಶ್ವತವಾದದ್ದು.
2. ದೇವಾಧಿದೇವನಿಗೆ ಕೃತಜ್ಞತಾ ಸ್ತುತಿ ಮಾಡಿರಿ; ಆತನ ಕೃಪೆಯು ಶಾಶ್ವತವಾದದ್ದು.
3. ಕರ್ತರ ಕರ್ತನಿಗೆ ಕೃತಜ್ಞತಾ ಸ್ತುತಿ ಮಾಡಿರಿ; ಆತನ ಕೃಪೆಯು ಶಾಶ್ವತವಾದದ್ದು.
4. ಮಹತ್ಕಾರ್ಯಗಳನ್ನು ನಡಿಸುವದಕ್ಕೆ ಆತನೊಬ್ಬನೇ ಶಕ್ತನು. ಆತನ ಕೃಪೆಯು ಶಾಶ್ವತವಾದದ್ದು.
5. ಆತನು ಆಕಾಶವನ್ನು ಜ್ಞಾನದಿಂದ ನಿರ್ಮಿಸಿದ್ದಾನೆ; ಆತನ ಕೃಪೆಯು ಶಾಶ್ವತವಾದದ್ದು.
6. ಆತನು ಭೂಮಿಯನ್ನು ಜಲರಾಶಿಗಳ ಮೇಲೆ ಹಾಸಿದ್ದಾನೆ; ಆತನ ಕೃಪೆಯು ಶಾಶ್ವತವಾದದ್ದು.
7. ಆತನು ಮಹಾಜ್ಯೋತಿರ್ಮಂಡಲಗಳನ್ನು ಸೃಷ್ಟಿಸಿದ್ದಾನೆ; ಆತನ ಕೃಪೆಯು ಶಾಶ್ವತವಾದದ್ದು.
8. ಸೂರ್ಯನು ಹಗಲನ್ನಾಳುತ್ತಾನೆ; ಆತನ ಕೃಪೆಯು ಶಾಶ್ವತವಾದದ್ದು.
9. ಚಂದ್ರ, ನಕ್ಷತ್ರಗಳು ರಾತ್ರಿಯನ್ನಾಳುತ್ತವೆ; ಆತನ ಕೃಪೆಯು ಶಾಶ್ವತವಾದದ್ದು.
10. ಆತನು ಐಗುಪ್ತ್ಯರ ಚೊಚ್ಚಲ ಮಕ್ಕಳನ್ನು ಸಂಹರಿಸಿದ್ದ. ಆತನ ಕೃಪೆಯು ಶಾಶ್ವತವಾದದ್ದು.



## ನೀವು ಕ್ರಿಸ್ತನಿಗಾಗಿ ಒಳ್ಳೆಯ ಸೈನಿಕರಾಗಬೇಕೆಂದು ಕರೆಯಲ್ಪಟ್ಟಿದ್ದೀರಿ.

**You are called to be a good SOLDIER FOR CHRIST!**

*ಸಹೋದರಿ ಎಂಜೆಲಿನ್*



ನಮ್ಮ ಕರ್ತನು ಮತ್ತು ರಕ್ಷಕನಾಗಿರುವ ಯೇಸುಕ್ರಿಸ್ತನ ಅಮೂಲ್ಯವಾದ ನಾಮದಲ್ಲಿ ನಿಮಗೆ ಶುಭಾಶಯಗಳು - ಆತನು ಎದ್ದವನು, ಆಡಳಿತ ನಡೆಸುವವನು ಮತ್ತು ಅತಿಬೇಗನೆ ಬರುವ ಅರಸನು.

ನಮ್ಮ ಸಂಸ್ಥಾಪಕರ ಪರವಾಗಿ, ಪಾ. ಸ್ಯಾಮ್ ಸೆಲ್‌ರಾಜ್, ಆತನ ಕರೆಯ ಸೇವೆಗಳ ಸಿಬ್ಬಂದಿ ಮತ್ತು ನಿಷ್ಠಾವಂತ ಬೆಂಬಲಿಗರೊಂದಿಗೆ ಒಟ್ಟಾಗಿ, ಈ ಸಂತೋಷದಾಯಕ ಮತ್ತು ಆಶೀರ್ವದಿಸಲ್ಪಟ್ಟ 80ನೇ ಸ್ವಾತಂತ್ರ್ಯ ದಿನಾಚರಣೆಯಂದು ನಾವು ಪ್ರತಿಯೊಬ್ಬ ಭಾರತೀಯರಿಗೂ ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತೇವೆ.

ಈ ಐತಿಹಾಸಿಕ ಮೈಲಿಗಲ್ಲು ನಮಗೆ ಆಶೀರ್ವದಿಸಲ್ಪಟ್ಟ ಸ್ವಾತಂತ್ರ್ಯವನ್ನು ಅಮೂಲ್ಯವಾಗಿಸಲು ನಮಗೆ ನೆನಪಿಸಲಿ, ನಮ್ಮ ನಡುವಿನ ಏಕತೆಯ ಬಂಧಗಳನ್ನು ಬಲಪಡಿಸುತ್ತದೆ. ನಮ್ಮ ಪ್ರೀತಿಯ ರಾಷ್ಟ್ರಕ್ಕಾಗಿ ಪ್ರಕಾಶಮಾನವಾದ, ಶಾಂತಿಯುತ ಮತ್ತು ಭರವಸೆ ತುಂಬಿದ ಭವಿಷ್ಯಕ್ಕಾಗಿ ಒಟ್ಟಾಗಿ ಕೆಲಸ ಮಾಡಲು ನಮಗೆ ಸ್ಫೂರ್ತಿ ನೀಡುತ್ತದೆ.

(3ನೇ ಪುಟಕ್ಕೆ)


## ಆತನ ಕರೆಯ ಪ್ರತಿಧ್ವನಿ



### ಕ್ರೈಸ್ತೀಯ ಯೂಟ್ಯೂಬ್ ಚಾನೆಲ್
### ಪಾ.ಎಸ್.ಸ್ಯಾಮ್ ಸೆಲ್ವರಾಜ್

ರವರಿಂದ ಪ್ರತಿಧ್ವನಿ 2 ನಿಮಿಷಗಳ ಸಂದೇಶವು ಆಂಗ್ಲಭಾಷೆ,

ಹಿಂದಿ ಭಾಷೆಯಲ್ಲಿ **1.00** ಮುಂಜಾನೆ ತಮಿಳು ಮತ್ತು ತೆಲುಗು ಭಾಷೆಯಲ್ಲಿ **2.00** ಮುಂಜಾನೆ ಮತ್ತು ತಮಿಳು ಮತ್ತು ಆಂಗ್ಲಭಾಷೆಯಲ್ಲಿ ಸಂದೇಶ ಮತ್ತು ಪ್ರಾರ್ಥನೆ

ಭಾನುವಾರ ಮುಂಜಾನೆ **8:30** ಮತ್ತು ಸಂಜೆ **6** ಗಂಟೆಗೆ

ನಿಮ್ಮ ಆಶೀರ್ವಾದವನ್ನು ಹೊಂದಿದ್ದರೆ ದಯವಿಟ್ಟು ಚಂದಾದಾರರಾಗಿ! ನಿಮ್ಮ ಕುಟುಂಬದವರಿಗೆ ಮತ್ತು ನೆರೆಹೊರೆಯವರಿಗೆ ಹಂಚಿಕೊಳ್ಳಿ!

ECHO OF HIS CALL - (Marching towards 60th year)
Estd. 1969

## from your dearly beloved brother...





### OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Dr. Angeline S. Kumari, M.A., M.Sc., M.Ed.
EX MANAGING EDITOR
Pastor Alex Samson Sam, B.Th., M.Div.
GENERAL MANAGER
Bro. N. Prakasam, M.A., M.Sc.(C&P), PGDHRM., MBA.
ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Sis. Sajini Cherian
Rev. Dr. J. John Rajarathnam, B.E.S., B.D., M.Th.
Rev. Dr. K.R. Rajasekaran
Adv. N. Balaji, B.Com., M.L.

EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293
Cell : (+91) 98410 71852, 98412 71858
E.MAIL
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.org
YOUTUBE CHANNEL
Echo of His Call

ಯೆಹೋವನ ಧರ್ಮಶಾಸ್ತ್ರವನ್ನು ಅನುಸರಿಸಿ ಸದಾಚಾರಿಗಳಾಗಿ
ನಡೆಯುವವರು ಧನ್ಯರು. - ಕೀರ್ತನೆ 119:1

ಕ್ರಿಸ್ತನಲ್ಲಿ ಆತ್ಮೀಯ ಸ್ನೇಹಿತರೇ,

ನಮ್ಮ ಕರ್ತನು ಮತ್ತು ರಕ್ಷಕನಾಗಿರುವ ಯೇಸುಕ್ರಿಸ್ತನ ಅದ್ಭುತವಾದ ನಾಮದಲ್ಲಿ ಆರಿಸುವಿಕೆಯ ಶುಭಾಶಯಗಳು!

ನಮ್ಮ ಕರ್ತನಾದ ಯೇಸುಕ್ರಿಸ್ತನಿಂದ ನೀವು ಆಶೀರ್ವಾದವನ್ನು ಹೊಂದಿದ್ದೀರಿ. ನಿಮ್ಮ ಮಹಿಮೆಯುಳ್ಳ ಭವಿಷ್ಯತ್‌ಗಾಗಿ ಅವಕಾಶದ ಬಾಗಿಲುಗಳನ್ನು ಆತನು ತೆರೆಯ ಮಾಡುವನು. ಎಲ್ಲಾ ಪರಿಸ್ಥಿತಿಗಳಲ್ಲಿ ಆತನನ್ನು ನಾವು ನಂಬುತ್ತೇವೆ. ನಾವು ಮುಂಚೆ ಮಾಡಿದ ಹಾಗೆ. ಏನೇ ಹಾಗಲಿ, ನಾವು ಕರ್ತನ ಮುಂದೆ ನಂಬಿಗಸ್ತರಾಗಿ ಬಹಳ ಜಾಗರೂಕರಾಗಿ ನಡೆಯಬೇಕು.

*ನೀನು ನನ್ನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಕಣ್ಣೀರನ್ನು ನಿಲ್ಲಿಸಿ*
*ನನ್ನ ಪಾದಗಳನ್ನು ಎಡವದಂತೆ ಕಾದಿದ್ದೀ.* - ಕೀರ್ತನೆ 116:9

ಇದು ನಮಗೆ ಅರ್ಥವಾಗುತ್ತದೆ, ಮುಂದಿನ ವರ್ಷ ಪ್ರಾರಂಭದಲ್ಲಿ, ಆತನ ಕರೆಯ ಪ್ರತಿಧ್ವನಿಯ ಮಾಸಪತ್ರಿಕೆ ಪ್ರತಿ ಪ್ರತಿಗೆ 2 ರೂಪಾಯಿಯನ್ನು ನಾವು ಕೊಡಬೇಕಾಗುತ್ತದೆ. ಇದು ನಮ್ಮ ಸೇವೆಯ ಮೇಲೆ ಗಮನಾರ್ಹ ಆರ್ಥಿಕ ಹೊರೆಯನ್ನು ಉಂಟುಮಾಡುತ್ತದೆ. ಆದ್ದರಿಂದ, ಆತನ ಕರೆಯ ಪ್ರತಿಧ್ವನಿಯ ನೋಂದಾಯಿತ ಮಾಸಿಕ ಪತ್ರಿಕೆಗಳಿಗೆ ಪ್ರಸ್ತುತ ಅಂಚೆ ದರವನ್ನು ಕಾಯ್ದುಕೊಳ್ಳಲು ನಮ್ಮ ಗೌರವಾನ್ವಿತ ಸಂವಹನ ಸಚಿವರು ಮತ್ತು ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿಗಳ ಹೃದಯಗಳನ್ನು ದೇವರು ಮುಟ್ಟಲಿ ಎಂದು ನಾವು ನಿಮ್ಮ ಪ್ರಾರ್ಥನೆಗಳನ್ನು ವಿನಮ್ರವಾಗಿ ಬೇಡಿಕೊಳ್ಳುತ್ತೇವೆ. ನಮ್ಮ ಗೌರವಾನ್ವಿತ ಪ್ರಧಾನಮಂತ್ರಿಗಳು ಮತ್ತು ಅವರ ಗುಂಪಿಗೆ ಒಳ್ಳೆಯ ಆರೋಗ್ಯ, ಜ್ಞಾನ ಮತ್ತು ದೀರ್ಘಾಯುಷ್ಯವನ್ನು ದೇವರು ಕೊಟ್ಟು ಆಶೀರ್ವಾದ ಮಾಡಲಿ.

ಜುಲೈ 04, 2026 ರಂದು ನಮ್ಮ ನೆಹೆಮೀಯ ಸತ್ಯವೇದ ಕಾಲೇಜುಗಳ ಪದವಿಯ ಆರಾಧನೆಯು ದೇವರ ಕೃಪೆಯಿಂದ ನಡೆಯಿತು. 35 ವಿದ್ಯಾರ್ಥಿಗಳು ಪದವಿಯನ್ನು ಹೊಂದಿದರು. ಅವರು ಮಹಿಮೆಯುಳ್ಳ ದೇವರ ಸೇವೆಗೆ ಪ್ರತ್ಯೇಕಿಸಲ್ಪಟ್ಟರು. ಅವರನ್ನು ಈಗ ಸುವಾರ್ತಿಕರಾಗಿ, ಭೋದಕರಾಗಿ, ಕ್ರೈಸ್ತ ಸೇವೆಯ ಇತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಸೇವಾ ಕ್ಷೇತ್ರಕ್ಕೆ ಕಳುಹಿಸಲಾಗುವುದು.



*26th Graduation Service of our Nehemiah Bible Colleges*

ಸು. ಬೆಂಜಮಿನ್ ಮೋಸಸ್. ದೇವರ ಮಹಾನ್ ವ್ಯಕ್ತಿ ಮತ್ತು ಸುವಾರ್ತೆಯ ಅತ್ಯುತ್ತಮ ಬೋಧಕ ಮತ್ತು ಆತನ ಕರೆಯ ಪ್ರತಿಧ್ವನಿಯ ಮಲಾಯಂ ಪತ್ರಿಕೆಯ ಸಹ ಸಂಪಾದಕರು. ಅವರ ಆತ್ಮೀಯ ಪತ್ನಿ ಶ್ರೀಮತಿ ಪ್ರಮೀಳಾ ಬೆಂಜಮಿನ್ ಮತ್ತು ಮಗಳು ಕುಮಾರಿ. ಮಹಿಮಾ ಬೆಂಜಮಿನ್ ಅವರೊಂದಿಗೆ ನಮ್ಮ ಮುಖ್ಯ ಕಛೇರಿಗೆ ಭೇಟಿ ನೀಡಿದರು. ನಮ್ಮೊಂದಿಗೆ ಆಶೀರ್ವದಿಸಲ್ಪಟ್ಟ ಸಂಗತಿ. ಅವರಿಗಾಗಿ ದೇವರಿಗೆ ನಾವು ತುಂಬಾ ಕೃತಜ್ಞತೆಯುಳ್ಳವರಾಗಿದ್ದೇವೆ.

Our Ministries: ECHO OF HIS CALL Monthly Magazines (16 languages) BIBLECOR - Postal Courses (3 languages) YouTube Ministry Online Courses Theological Correspondence Courses (2 languages) Church Planting Nehemiah Bible Colleges Gospel Printing Press Great Commission Partners St. Paul's Matriculation School Crusades Community Development



*Ev. Benjamin Moses, Associate Editor (Malayalam) and family*

ಭಾರತವು ಸುಮಾರು 1.5 ಬಿಲಿಯನ್ ಜನಸಂಖ್ಯೆಯನ್ನು ಹೊಂದಿರುವ ಮಹಾನ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಅಂಕಿಅಂಶಗಳು ಕ್ರೈಸ್ತರ ಜನಸಂಖ್ಯೆಯು ಸುಮಾರು 2 ಪ್ರತಿಶತದಷ್ಟು ಮಾತ್ರ ಇದ್ದಾರೆ ಎಂದು ಸೂಚಿಸುತ್ತದೆ. ಆದ್ದರಿಂದ, ಯೆಸುಕ್ರಿಸ್ತನ ಸುವಾರ್ತೆಯೊಂದಿಗೆ ತಲುಪದೆ ಇರುವುದನ್ನು ತಲುಪುವ ಮಹತ್ತರವಾದ ಜವಾಬ್ದಾರಿಯನ್ನು ನಾವು ಹೊಂದಿದ್ದೇವೆ.

ಈ ಸಂದೇಶವನ್ನು ಓದುತ್ತಿರುವಾಗ, ದೇವರು ನಿಮ್ಮ ಹೃದಯದಲ್ಲಿ ಮಾತನಾಡುತ್ತಾ ಇದ್ದರೆ ಈ ಸೇವೆಯಲ್ಲಿ ನೀವು ಕೂಡ ಪಾಲುದಾರರಾಗುವುದಕ್ಕೆ ನಡೆಸಿದರೆ ಆತನ ನಡೆಸುವಿಕೆಗೆ ಅನುಸಾರವಾಗಿ ಮಾಡಬೇಕೆಂದು ನಾವು ನಿಮ್ಮನ್ನು ಪ್ರೋತ್ಸಾಹ ಪಡಿಸುತ್ತವೆ. ದಯಮಾಡಿ ನಿಮ್ಮ ಸ್ಥಾನಿಕ ಸಭಾಪಾಲಕರ ಮತ್ತು ಅವರ ಸೇವೆಗಾಗಿ ಪ್ರಾರ್ಥನೆ ಮಾಡಿರಿ. ಕರ್ತನು ನಿಮ್ಮನ್ನು ಶಕ್ತಗೊಳಿಸಿದಂತೆ ಅವರಿಗೆ ಸಹಕರಿಸಿರಿ. ನಾವು ನಿರಂತರವಾಗಿ ನಿಮಗಾಗಿ ಪ್ರಾರ್ಥನೆ ಮಾಡುತ್ತೇವೆ. ದೇವರು ನಿಮ್ಮನ್ನು ಅಧಿಕವಾಗಿ ಆಶೀರ್ವದಿಸಲಿ.

*ಬೆಳೆಯು ಬಹಳ, ಕೆಲಸದವರು ಸ್ವಲ್ಪ.*
*ಆದ್ದರಿಂದ ಬೆಳೆಯ ಯಜಮಾನನನ್ನು ನಿನ್ನ ಬೆಳೆಗೆ*
*ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ.*

ಮತ್ತಾಯ 9:37-38

ಕ್ರಿಸ್ತಯೇಸುವಿನಲ್ಲಿ, ನಿಮ್ಮ ಸಹೋದರ

ಪಾ. ಎಸ್. ಸ್ಯಾಮ್ ಸೆಲ್ವರಾಜ್

E.mail : sam@echoofhiscall.org

(1ನೇ ಪುಟದಿಂದ)

ನಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನು ಆಚರಿಸುತ್ತಿರುವಾಗ, ನಮ್ಮ ಹೃದಯಗಳು ಸ್ವಾಭಾವಿಕವಾಗಿ ನಮ್ಮ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ ವೀರ ಪುರುಷರು ಮತ್ತು ಮಹಿಳೆಯರ ಅಸಂಖ್ಯಾತ ತ್ಯಾಗಗಳ ಕಡೆಗೆ ಕೃತಜ್ಞತೆಯಿಂದ ತಿರುಗಿ. ಅವರ ಧೈರ್ಯ, ನಿರಂತರ ಪ್ರಯತ್ನ, ಅಚಲವಾದ ಸಮರ್ಪಣೆಯು ನಮ್ಮ ಸ್ವಾತಂತ್ರ್ಯವನ್ನು ನಿರ್ಮಿಸಿದ ಅಡಿಪಾಯವಾಯಿತು. ಸುಮಾರು ಎಂಟು ದಶಕಗಳ ಹಿಂದೆ ಬದುಕಿದ್ದವರ ಬಲಿದಾನ ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯಕ್ಕೆ ಬೆಲೆಯಾಯಿತು. ಅವರ ರಕ್ತವು ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಬಿಜವಾಯಿತು.

ಇದು 2000 ವರ್ಷಗಳ ಹಿಂದೆ ಕಲ್ವಾರಿ ಶಿಲುಬೆಯ ಮೇಲೆ ನಮ್ಮ ಕರ್ತನಾದ ಯೇಸುಕ್ರಿಸ್ತನು ಇನ್ನೂ ಹೆಚ್ಚಿನ ತ್ಯಾಗವನ್ನು ನೆನಪಿಸುತ್ತದೆ. ಆತನ ಅಮೂಲ್ಯವಾದ ರಕ್ತವು ನಮ್ಮನ್ನು ಕೊಂಡುಕೊಂಡಿದೆ ಇದು ನಮಗೆ ದೊಡ್ಡ ಮತ್ತು ನಿತ್ಯವಾದ ಸ್ವಾತಂತ್ರ್ಯವಾಗಿದೆ. ಪಾಪದಿಂದ, ರೋಗದಿಂದ, ವ್ಯಸನಗಳಿಂದ, ಆತ್ಮೀಕ ಬಂಧನದಿಂದ ಮತ್ತು ಸಂತತಿಯ ಶಾಪಗಳಿಂದ ನಮಗೆ ಸ್ವಾತಂತ್ರ್ಯವು ಸಿಕ್ಕಿದೆ.

ದೇವರ ವಾಕ್ಯವು ನಮಗೆ ಪ್ರಕಟಪಡಿಸುತ್ತದೆ :

ಆತನು ನಮಗಾಗಿ ಶಾಪಗ್ರಸ್ತನಾದನು (ಗಲಾತ್ಯ 3:13).

ಆತನ ತ್ಯಾಗದ ಮೂಲಕವಾಗಿ, ನಾವು ಕತ್ತಲೆಯಿಂದ ಬಿಡುಗಡೆಯನ್ನು ಹೊಂದಿದ್ದೇವೆ. ಆತನು ಅಗಮ್ಯವಾದ ಬೆಳಕಿನಲ್ಲಿ ನಮ್ಮನ್ನು ತೆಗೆದುಕೊಂಡು ಬಂದಿದ್ದಾನೆ.

ಯೇಸುಕ್ರಿಸ್ತನು ಸ್ವಂತಹ ಘೋಷಿಸಿದನು :

ನೀವು ಸತ್ಯವನ್ನು ತಿಳಿದುಕೊಳ್ಳಿರಿ, ಸತ್ಯವು ನಿಮ್ಮನ್ನು ಬಿಡುಗಡೆ ಮಾಡುತ್ತದೆ (ಯೋಹಾನ 8:32).

ದೇವರಿಗೆ ಸ್ತೋತ್ರವುಂಟಾಗಲಿ - ನಾವು ಸತ್ಯವಾಗಿ ಯೇಸುಕ್ರಿಸ್ತನಲ್ಲಿ ಸ್ವತಂತ್ರವಾಗಿದ್ದೇವೆ!

*ಯೇಸುಕ್ರಿಸ್ತರು ಮತ್ತು ಬಿರುಗಾಳಿ :*

ಮಾರ್ಕ್ 4ನೇ ಅಧ್ಯಾಯದಲ್ಲಿ, ಯೇಸುಕ್ರಿಸ್ತನು ದೋಣಿಯಲ್ಲಿ ಮಲಗಿರುವಾಗ ಆತನ ಶಿಷ್ಯರು ಘೋರವಾದ ಬಿರುಗಾಳಿಯನ್ನು ಎದುರಿಸಿದ ಶಕ್ತಿಯುಳ್ಳ ದಾಖಲೆಯನ್ನು ನಾವು ನೋಡುತ್ತೇವೆ. ಅವರು ಭಯದಿಂದ, ಅವರು ಆತನನ್ನು ಎಬ್ಬಿಸಿ ಮತ್ತು ಕೂಗಿದರು.

**ಗುರುವೇ, ನಾವು ಮುಳುಗಿ ಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ?**

ಯೇಸುಕ್ರಿಸ್ತನು ಎದ್ದು ಗಾಳಿಯನ್ನು ಮತ್ತು ಸಮುದ್ರವನ್ನು ಗದರಿಸಿದನು. ಶಿಷ್ಯರ ನಂಬಿಕೆಯ ವಿಷಯದಲ್ಲಿ ಅವರಿಗೆ ಸವಾಲನ್ನು ಹಾಕಿದನು. ಆತನು ಸೃಷ್ಟಿಯ ಮೇಲೆ ಸಂಪೂರ್ಣ ಅಧಿಕಾರವನ್ನು ವೀಕ್ಷಿಸಿದಾಗ ಅವರು ವಿಸ್ಮಯದಿಂದ ತುಂಬಿದರು.

*ಮಾರ್ಕ್ 4:36 ಹೇಳುತ್ತದೆ :*

ಆತನನ್ನು ಅದೇ ದೋಣಿಯಲ್ಲಿ ಹಾಗೆಯೇ ಕರಕೊಂಡು ಹೋದರು.

ಯೇಸುಕ್ರಿಸ್ತನು ನಿರಂತರವಾಗಿ ಸೇವೆಯನ್ನು ಮಾಡುತ್ತಾ ಇದ್ದನು. ಆತನು ದೈಹಿಕವಾಗಿ ದಣಿದಿದ್ದನು. ಮಾನಸಿಕವಾಗಿ ಸುಸ್ತಾಗಿದ್ದನು. ಗುಂಪಿನಿಂದ ದೂರವಾಗಿ ಸ್ವಲ್ಪ ಸಮಯ ಆತನಿಗೆ ವಿಶ್ರಾಂತಿಯು ಬೇಕಾಗಿತ್ತು. ಆತನ ಶಿಷ್ಯರೊಂದಿಗೆ ಮೌನದ ಸಮಯ.

ಆತನು ಹೇಗೆ ಇದ್ದಾನೋ ಅದೇ ರೀತಿಯಾಗಿ ತೆಗೆದುಕೊಂಡು ಹೋದರು. ಸುಸ್ತು, ದಣಿವು, ನಿದ್ರೆಯ ಅವಶ್ಯಕತೆ ಇತ್ತು. ದೋಣಿಯು ತನ್ನ ಪಯಣವನ್ನು ಪ್ರಾರಂಭಿಸಿದ ಕ್ಷಣವೇ, ಯೇಸುಕ್ರಿಸ್ತನು ನಿದ್ರೆಗೆ ಜಾರಿದನು.

ನಮ್ಮಲ್ಲಿ ಅನೇಕರು ಇದನ್ನು ಜೋಡಿಸುತ್ತಾರೆ. ದೀರ್ಘಕಾಲದ ಕೆಲಸದ ನಂತರ, ಸೇವೆಗಳು, ಜವಾಬ್ದಾರಿಗಳು ಅಥವಾ ಸೇವೆ, ನಾವು ಮೌನದ ಸ್ಥಳ ಸಿಕ್ಕ ತಕ್ಷಣವೇ ಆಯಾಸವು ನಮ್ಮನ್ನು ಆವರಿಸುತ್ತದೆ.

ಆದಾಗ್ಯೂ ಅದೇ ವಚನದಲ್ಲಿ, ಸಾಮಾನ್ಯವಾಗಿ ಕಡೆಗಣಿಸಲ್ಪಡುವ ಸಣ್ಣ ಆದರೆ ಗಮನಾರ್ಹವಾದ ವಿವರವಿದೆ. ಆಳವಾದ ಆಧ್ಯಾತ್ಮಿಕ ಬಹಿರಂಗ ಪಡಿಸುವಿಕೆಯನ್ನು ಹೊಂದಿರುವ ವಿವರ.

## VERY URGENT NOTICE!




There may be unavoidable disruptions in the postal dispatch of **Echo of His Call** in the near future. If you wish to continue receiving **Echo of His Call** without interruption, please send us your name, address, email, and WhatsApp number via letter, email, phone call, or SMS/WhatsApp message immediately.

Your support helps us serve you better!

**Our address:**

**ECHO OF HIS CALL,**
**10, Mohammed Abdullah 2nd Street, Chepauk, Chennai-600 005, India**
**Cell: (+91) 98412 71858 / 98410 71858 E.mail: sam@echoofhiscall.org**

ಆತನ ಸಂಗಡ ಅಲ್ಲಿ ಬೇರೆ ದೋಣಿಗಳು ಕೂಡ ಇದ್ದವು.

ಮಾರ್ಕ ಮಾತ್ರವೇ ಈ ವಿವರವನ್ನು ದಾಖಲಿಸುತ್ತಾನೆ. ಮಾರ್ಕನ ಸುವಾರ್ತೆಯು ಅನೇಕ ಎದ್ದು ಕಾಣುವ ಪ್ರತ್ಯಕ್ಷದರ್ಶಿಗಳ ವಿವರಣೆಯನ್ನು ಒಳಗೊಂಡಿದೆ. ಪೇತ್ರನು, ಬೆಸ್ತನು ಮತ್ತು ಯೇಸುವಿನ ನಿಕಟ ಶಿಷ್ಯರಲ್ಲಿ ಒಬ್ಬರಿಂದ ಪ್ರಭಾವಿತ ರಾಗಿದ್ದಾರೆಂದು ನಂಬಲಾಗಿದೆ.

ಮಾರ್ಕನು ವಿಶೇಷವಾಗಿ ಅನೇಕ ದಾಖಲೆಗಳನ್ನು ವಿವರಿಸುತ್ತಾನೆ. ಕೆಲವು ಈ ರೀತಿಯಾಗಿ ಒಳಗೊಂಡಿವೆ.

- ಯೇಸುಕ್ರಿಸ್ತನು ತಲೆಗಿಂಬನ್ನು ಒರಗಿ ನಿದ್ರೆ ಮಾಡುತ್ತಿದ್ದನು. (ಮಾರ್ಕ 4:38).
- ಹಸಿರು ಹುಲ್ಲಿನ ಮೇಲೆ **5000** ಜನರಿಗೆ ಊಟ ಬಡಿಸಿದನು (ಮಾರ್ಕ 6:39).
- ಜನರು ಪಂಣಿಗೆ ನೂರರಂತೆ ಐವತ್ತರಂತೆ ಸಾಲುಸಾಲಾಗಿ ಕೂತುಕೊಂಡರು. (ಮಾರ್ಕ 6:40).
- ಎರಡು ಹಂತದಲ್ಲಿ ಕುರುಡನನ್ನು ಸ್ವಸ್ಥಮಾಡಿದ್ದು (ಮಾರ್ಕ 8:22-25).

ಆದ್ದರಿಂದ, ಮಾರ್ಕನು ಬರೆಯುವಾಗ, ಬೇರೆ ಸಣ್ಣ ದೋಣಿಗಳು ಅತನ ಸಂಗಡ ಇದ್ದವು. ಇದು ಯಾವುದೇ ಅವಶ್ಯಕತೆಯು ಇಲ್ಲದೆ ಇರುವ ವಿವರ. ಇದು ಶಕ್ತಿಯುಳ್ಳ ಸತ್ಯವನ್ನು ಪ್ರಕಟಿಸುತ್ತದೆ.

ನಿಮ್ಮ ಜೀವಿತವು ಕಾಣಲ್ಪಡುತ್ತದೆ, ನಿಮ್ಮ ಬಿರುಗಾಳಿಯನ್ನು ಗಮನಿಸಲಾಗುತ್ತದೆ. ನಿಮ್ಮ ಬಿಡುಗಡೆಯ ಸಾಕ್ಷಿಯು ಬೇರೆಯವರ ಸ್ವಾತಂತ್ರ್ಯಕ್ಕೆ ದಾರಿಯಾಗುತ್ತದೆ. ಚಂಡಮಾರುತದ ಮಧ್ಯದಲ್ಲಿ ಯೇಸುಕ್ರಿಸ್ತನನ್ನು ಹಿಂಬಾಲಿಸಿದ ಪುಟ್ಟ ದೋಣಿಗಳಿಗಾಗಿ ನಾವು ದೇವರಿಗೆ ಧನ್ಯವಾದ ಹೇಳುತ್ತೇನೆ.

## ಚಿಕ್ಕ ದೋಣಿಗಳು ನಮಗೆ ಏನನ್ನು ಜ್ಞಾಪಕ ಪಡಿಸುತ್ತವೆ?

### 1. ಜ್ಞಾಪಕವಿರಲಿ : ನಿಮ್ಮನ್ನು ನೋಡುತ್ತಿರುವ ಚಿಕ್ಕ ದೋಣಿಗಳು ನಿಮ್ಮನ್ನು ಆವರಿಸಿ ಕೊಂಡಿವೆ.

ಆತನ ಸ್ತುತಿಯನ್ನು ನಾವು ಪ್ರಕಟಿಸುವುದಕ್ಕೆ ದೇವರು ನಮ್ಮನ್ನು ಕರೆದಿದ್ದಾನೆ.

ನೀವಾದರೋ ನಿಮ್ಮನ್ನು ಕತ್ತಲೆ ಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದು ಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. 1 ಪೇತ್ರ 2:29.

ನಾವು ಕ್ರಿಸ್ತನಲ್ಲಿ ಸ್ವಾತಂತ್ರ್ಯವನ್ನು ನಮಗಾಗಿ ಮಾತ್ರ ನಾವು ಪಡೆದುಕೊಂಡಿಲ್ಲ. ಆದರೆ ಆತನ ಬೆಳಕು ನಮ್ಮ ಜೀವಿತದ ಮೂಲಕವಾಗಿ ಪ್ರಕಾಶಿಸಲಿ ಮತ್ತು ಬೇರೆಯವರನ್ನು ಆತನ ಕಡೆಗೆ ನಡೆಸುವ.

ನಿಮಗೆ ಅರಿವಿಕೆ ಆಗಲಿ ಅಥವಾ ಇಲ್ಲದೆ ಹೋಗಲಿ. ಜನರು ನಮ್ಮನ್ನು ನೋಡುತ್ತಾ ಇದ್ದಾರೆ. ನಮ್ಮ ನಂಬಿಕೆ, ನಮ್ಮ ನಡವಳಿಕೆ, ನಮ್ಮ ಮಾತುಗಳು, ನಮ್ಮ ಕಾರ್ಯಗಳು, ಒತ್ತಡದಲ್ಲಿ ಇರುವಾಗ ನಮ್ಮ ಪ್ರತಿಕ್ರಿಯೆಗಳು. ಚಂಡಮಾರುತದ ಜೀವಿತದಲ್ಲಿ ನಾವು ಹೇಗೆ ನಡೆದುಕೊಳ್ಳುತ್ತೇವೆ.

ಯೇಸುಕ್ರಿಸ್ತನು ಹೇಳಿದನು :

**ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು.** ಮತ್ತಾಯ 5:16

ಚಂಡಮಾರುತ ಮಧ್ಯದಲ್ಲಿ ಕೂಡ, ನಮ್ಮಲ್ಲಿ ಅನೇಕರ ಜೀವಿತವು ದೇವರ ಒಳ್ಳೆಯತನವನ್ನು ಪ್ರಕಟಿಸುತ್ತದೆ. ಪರಲೋಕದಲ್ಲಿರುವ ನಮ್ಮ ತಂದೆಯನ್ನು ಬೇರೆಯವರು ಮಹಿಮೆ ಪಡಿಸುವುದಕ್ಕೆ ಕಾರಣವಾಗುತ್ತದೆ.

ಯಾಕೆ ಆ ಚಿಕ್ಕ ದೋಣಿಗಳು ಯೇಸುವನ್ನು ಹಿಂಬಾಲಿಸುತ್ತಿದ್ದವು ಎಂಬುದು ನನಗೆ ಗೊತ್ತಿಲ್ಲ.

ಬಹುಶಃ :

- ಕೆಲವರು ತಮ್ಮ ಕುತೂಹಲದಿಂದ ಹಿಂಬಾಲಿಸುತ್ತಿರಬಹುದು.
- ಇನ್ನೂ ಕೆಲವರು ಆತನ ಕ್ರಿಯೆಗಳಿಂದ ಆಶ್ಚರ್ಯ ಹೊಂದಿರಬಹುದು.
- ಕೆಲವು ಗಮನಿಸಿ ಮತ್ತು ಟೀಕೆ ಮಾಡುವುದಕ್ಕೆ ಹಿಂಬಾಲಿಸುತ್ತಿದ್ದರು.
- ಕೆಲವರು ದೇವರ ವಾಕ್ಯದ ಹಸಿವೆಯಿಂದ ಹಿಂಬಾಲಿಸುತ್ತಿದ್ದರು.
- ಕೆಲವರು ಹತ್ತಿರವಿರುವುದರಿಂದ, ಬೆಸ್ತರು ಮತ್ತು ಪ್ರಯಾಣಿಕರಾಗಿರುವುದರಿಂದ.

ಯಾವುದೇ ಕಾರಣವಿರಬಹುದು, ಚಂಡಮಾರುತ ಬಂದಾಗ ಶಿಷ್ಯರು ಹೇಗೆ ಪ್ರತಿಕ್ರಿಯಿಸಿದರು ಎಂಬುದಕ್ಕೆ ಅವರು ಸಾಕ್ಷಿಯಾದರು.

ನಮ್ಮ ಸುತ್ತಮುತ್ತ ಇರುವ ಚಿಕ್ಕದೋಣಿಗಳು ಯಾವುವು?

- ನಮ್ಮ ಮಕ್ಕಳು
- ನಮ್ಮ ಸಂಗಾತಿಗಳು
- ನಮ್ಮ ಕುಟುಂಬದ ಸದಸ್ಯರು
- ನಮ್ಮ ನೆರೆಹೊರೆಯರು
- ನಮ್ಮ ಜೊತೆ ಕೆಲಸದವರು
- ನಮ್ಮ ಸಭೆಯ ಕುಟುಂಬ
- ನಮ್ಮ ಸಮುದಾಯಗಳು

ನೀವು ಏಕಾಂಗಿ ದೋಣಿಯಲ್ಲಿ ಸಾಗುತ್ತಿಲ್ಲ. ನಿಮ್ಮ ಜೊತೆಯಲ್ಲಿ ಚಿಕ್ಕದೋಣಿಗಳು ಸಾಗುತ್ತಾ ಇವೆ. ನಿಮ್ಮ ಪಯಣವನ್ನು ಗಮನಿಸುತ್ತಾ ಇವೆ.

### 2. ಜ್ಞಾಪಕವಿರಲಿ : ನೀವು ಕ್ರಿಸ್ತನನ್ನು ಒಯ್ಯುತ್ತೀರಿ.

ಶಿಷ್ಯರ ದೋಣಿ ಮತ್ತು ಚಿಕ್ಕ ದೋಣಿಗಳ ನಡುವಿನ ದೊಡ್ಡ ವ್ಯತ್ಯಾಸವೆಂದರೆ ಚಂಡ ಮಾರುತವಲ್ಲ, ಅದು ಯೇಸುಕ್ರಿಸ್ತನ ಪ್ರಸನ್ನತೆ.

ಏನೇ ಹಾಗಲಿ ನಾವು ಎಲ್ಲೆಲ್ಲಿ ಹೋಗುತ್ತೇವೆ ಯೇಸುಕ್ರಿಸ್ತನನ್ನು ಒಯ್ಯುತ್ತೇವೆ. ನಾವು ಪವಿತ್ರಾತ್ಮನ ದೇವಾಲಯವಾಗಿದ್ದೇವೆ. ಯೇಸುಕ್ರಿಸ್ತನ ಪ್ರಸನ್ನತೆಯು ನಮ್ಮ ಸಂಗಡವಿದೆ.

ಆದಾಗ್ಯೂ ಇನ್ನು ನಮ್ಮ ಸುತ್ತಮುತ್ತ ಆತನು ಇಲ್ಲದೆ ಜೀವಿಸುತ್ತಾ ಇದ್ದಾರೆ. ಭಯ, ಗೊಂದಲ, ಹತಾಶೆ, ಆಧ್ಯಾತ್ಮಿಕ ಬಂಧನ ಮತ್ತು ಪಾಪದ ಸರಪಳಿಗಳಲ್ಲಿ ಸಿಕ್ಕಿಬಿದ್ದಿದ್ದಾರೆ. ಯೇಸುಕ್ರಿಸ್ತನನ್ನು ಹೊತ್ತವರು ಹೇಗೆ ಪ್ರತಿಕ್ರಿಯಿಸುತ್ತಾರೆ, ಮಾತನಾಡುತ್ತಾರೆ ಮತ್ತು ಬದುಕುತ್ತಾರೆ ಎಂಬುದನ್ನು ಅವರು ನೋಡುತ್ತಿದ್ದಾರೆ.

ಯೇಸುಕ್ರಿಸ್ತನು ಘೋಷಿಸಿದನು :

**ಕರ್ತನ ಆತ್ಮವು ನನ್ನ ಮೇಲೆ ಇದೆ. ಆತನು ನನ್ನನ್ನು ಬಡವರಿಗೆ ಶುಭ ವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ ಬಿಡುಗಡೆಯಾಗುವುದನ್ನು ಮತ್ತು ಕುರುಡರಿಗೆ ಕಣ್ಣು ಬರುವುದನ್ನು ಪ್ರಸಿದ್ಧಿ ಪಡಿಸುವುದಕ್ಕೂ, ಮನ ಮುರಿದವರನ್ನು ಬಿಡಿಸಿ ಕಳುಹಿಸುವುದಕ್ಕೂ,** ಲೂಕ 4:18.

ಇದನ್ನು ಜ್ಞಾಪಕವಿಟ್ಟುಕೊಳ್ಳಿರಿ : ನೀವು ಸ್ವತಂತ್ರದ ರಾಯಭಾರಿಗಳು ಆಗಿದ್ದಾರೆ.

ನಿಮ್ಮ ಸುತ್ತಲಿನ ಚಿಕ್ಕ ದೋಣಿಗಳಿಗೆ ನೀವು ಅವರ ಸ್ವಾತಂತ್ರ್ಯದ ಚಾನಲ್ ಆಗಲು ದೇವರು ನಿಮ್ಮನ್ನು ಬಿಡುಗಡೆಗೊಳಿಸಿದ್ದಾನೆ.

ನಿಮ್ಮ ದೋಣಿಯಲ್ಲಿ ಯಾರು ಇದ್ದಾರೆಂಬುದನ್ನು ಎಂದಿಗೂ ಮರೆಯಬೇಡಿ. ಮತ್ತು ಯಾರು ಇಲ್ಲ.

ನಿಮ್ಮ ಜೀವನವು ಒಂದು ಸಂದೇಶವಾಗಿದೆ ಈಗಾಗಲೇ ಜನರು ಅದನ್ನು ಓದುತ್ತಾ ಇದ್ದಾರೆ.

ನೀವು ಯಾವ ಸಂದೇಶವನ್ನು ಬೋಧಿಸುತ್ತಾ ಇದ್ದೀರಿ?

(6ನೇ ಪುಟಕ್ಕೆ)

GREAT COMMISSION PARTNERS
ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)
ತ್ವರಿತಗೊಳಿಸುವುದು (II ತಿಮೋಥಿ. 1:6)
ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು
**19 ಆಗಸ್ಟ್ 2026 ರಿಂದ 18 ಸೆಪ್ಟೆಂಬರ್ 2026 ರ ವರೆಗೆ**
(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)



## ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಆಗಸ್ಟ್ 19 : ತಟ್ಟೆ ತಯಾರಕರು, ತಟ್ಟೆ ಗ್ರೈಂಡರ್‌ಗಳು, ಸ್ಕ್ರೀನ್ ಪ್ರಿಂಟರ್‌ಗಳು ಮತ್ತು ಇತರರಿಂದ ಬಾಹ್ಯ ಸಹಯೋಗದೊಂದಿಗೆ ನಮ್ಮ ಆತನ ಕರೆಯ ಪ್ರತಿಧ್ವನಿಯ ಸೇವೆಗಳನ್ನು ಆಶೀರ್ವದಿಸಿದ್ದಾನೆ.

ಆಗಸ್ಟ್ 20 : ನಮ್ಮ ನೆಹೆಮೀಯ ಸತ್ಯವೇದ ಕಾಲೇಜು ಅಧ್ಯಾಪಕರು ಮತ್ತು ಅವರ ಕುಟುಂಬದ ಸದಸ್ಯರುಗಳಿಗಾಗಿ.

ಆಗಸ್ಟ್ 21 : ನಮ್ಮ ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು.

ಆಗಸ್ಟ್ 22 : ಆಗಸ್ಟ್ 10, 2026 ರಂದು ನಮ್ಮ 57ನೇ ವಾರ್ಷಿಕೋತ್ಸವ ಆಚರಣೆ ಮೇಲೆ ದೇವರ ಆಶೀರ್ವಾದಕ್ಕಾಗಿ.

ಆಗಸ್ಟ್ 23 : ನಮ್ಮ ಸೇವಾಕ್ಷೇತ್ರದ ಕೆಲಸಗಾರರ ದೊಡ್ಡ ಸಮರ್ಪಣೆಗಾಗಿ.

ಆಗಸ್ಟ್ 24 : ನಮ್ಮ ಹಿರಿಯ ಸಭಾಪಾಲಕರು ಮತ್ತು ಅವರ ಕುಟುಂಬದ ಮೇಲೆ ಆತನ ಕಾಳಜಿಗಾಗಿ.

ಆಗಸ್ಟ್ 25 : ಕಳೆದ ತಿಂಗಳು ದೇವರ ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸಿದಕ್ಕಾಗಿ.

ಆಗಸ್ಟ್ 26 : ನಮ್ಮ ಸಭೆಗಳಿಗೆ ಹೊಸ ವಿಶ್ವಾಸಿಗಳನ್ನು ಸೇರಿಸಿದ್ದಕ್ಕಾಗಿ.

ಆಗಸ್ಟ್ 27 : ಆತನ ದಯೆಯು ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಭಾಗಿಗಳು, ನಂಬಿಕೆಯ ಪಾಲುದಾರರು, ಆಜೀವ ಪಾಲುದಾರರು, ಮನವಿಯ ಪಾಲುಗಾರರು, ದೊಡ್ಡ ಆಜ್ಞೆಯ ಪಾಲುಗಾರರು ಮತ್ತು ಅವರ ಕುಟುಂಬಗಳ ಮೇಲೆ ಆತನ ದಯೆಗಾಗಿ.

ಆಗಸ್ಟ್ 28 : 2026-27ನೇ ಶೈಕ್ಷಣಿಕ ವರ್ಷಕ್ಕೆ ನಮ್ಮ ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ ಹೊಸ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ.

ಆಗಸ್ಟ್ 29 : ನಮ್ಮ ಎಲ್ಲಾ ಸಿಬ್ಬಂದಿ ವರ್ಗದವರನ್ನು ಮತ್ತು ಅವರ ಕುಟುಂಬವನ್ನು ಸಂರಕ್ಷಣೆ ಮಾಡಿದ್ದಕ್ಕಾಗಿ.

ಆಗಸ್ಟ್ 30 : ನೈತಿಕವಾಗಿ ಮತ್ತು ಆರ್ಥಿಕವಾಗಿ ನಮ್ಮನ್ನು ಬೆಂಬಲಿಸುವ ಪಾಲುದಾರರೊಂದಿಗೆ ನಮ್ಮನ್ನು ಆಶೀರ್ವದಿಸಿದ್ದಾನೆ.

ಆಗಸ್ಟ್ 31 : ಆತನ ಕರೆಯ ಪ್ರತಿಧ್ವನಿಯ ಸೇವೆ ಪತ್ರಿಕಾ ಸೇವೆಯನ್ನು ನಿಷ್ಠೆಯಿಂದ ಬೆಂಬಲಿಸುವ ಸಹ ಸಂಪಾದಕರೊಂದಿಗೆ ನಮ್ಮ ಸೇವೆಯನ್ನು ಆಶೀರ್ವದಿಸಿದ್ದಾನೆ.

ಸೆಪ್ಟೆಂಬರ್ 01 : ಐಕ್ಯತೆ ಮತ್ತು ಮನಸ್ಸಿನ ಏಕತೆಯೊಂದಿಗೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವ ಸಮರ್ಪಿತ ಉದ್ಯೋಗಿಗಳೊಂದಿಗೆ ನಮ್ಮನ್ನು ಆಶೀರ್ವದಿಸಿದ್ದಾನೆ.

ಸೆಪ್ಟೆಂಬರ್ 02 : ನಮ್ಮ ಮುಖ್ಯ ಸಭೆಯಲ್ಲಿ ಯೌವ್ವನ ಹುಡುಗ ಮತ್ತು ಹುಡುಗಿಯರ ಯೌವ್ವನಸ್ಥರ ಕೂಟವನ್ನು ಆಶೀರ್ವದಿಸಿದ್ದಾನೆ.

ಸೆಪ್ಟೆಂಬರ್ 03 : ಸೇವಾಕ್ಷೇತ್ರಗಳಲ್ಲಿ ನಮ್ಮ ಮಿಷನರಿಗಳ ಮತ್ತು ಅವರ ಕುಟುಂಬಗಳ ಸುರಕ್ಷತೆಗಾಗಿ.

## ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ಸೆಪ್ಟೆಂಬರ್ 04 : ದೇವರು ಈ ತಿಂಗಳ ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸುವಂತೆ.

ಸೆಪ್ಟೆಂಬರ್ 05 : 2026-27ನೇಯ ಶೈಕ್ಷಣಿಕ ವರ್ಷದ ನಮ್ಮ ನೆಹೆಮೀಯ ಸತ್ಯವೇದ ಕಾಲೇಜಿನ ವಿದ್ಯಾರ್ಥಿಗಳಿಗಾಗಿ.

ಸೆಪ್ಟೆಂಬರ್ 06 : 2026-27ನೇಯ ಶೈಕ್ಷಣಿಕ ವರ್ಷದ ನಮ್ಮ ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗಾಗಿ.

ಸೆಪ್ಟೆಂಬರ್ 07 : ನಮ್ಮ ರಾಜ್ಯಸಂಯೋಜಕರ ಮತ್ತು ಅವರ ಕುಟುಂಬಗಳ ಆರೋಗ್ಯಕ್ಕಾಗಿ.

ಸೆಪ್ಟೆಂಬರ್ 08 : ಭಾರತದ ತಲುಪದೇ ಇರುವ ಸ್ಥಳಗಳಿಗೆ ತಲುಪುವಂತೆ ನಮ್ಮ ಸಶಕ್ತಗೊಳಿಸುವಂತೆ.

ಸೆಪ್ಟೆಂಬರ್ 09 : ನಮ್ಮ ಸೇವೆಯ ಚಟುವಟಿಕೆಗಳು ಮತ್ತು ಸೇವೆಯ ವಿಸ್ತರಣೆಗಾಗಿ.

ಸೆಪ್ಟೆಂಬರ್ 10 : ನಮ್ಮ ಪ್ರಿಂಟರ್, ಸಹಾಯಕ ಪ್ರಿಂಟರ್ ಮತ್ತು ಮುದ್ರಣಾಲಯದಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರು.

ಸೆಪ್ಟೆಂಬರ್ 11 : ಪ್ರಪಂಚದಾದ್ಯಂತಹ ಎಲ್ಲಾ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ.

ಸೆಪ್ಟೆಂಬರ್ 12 : ಮದ್ಯವ್ಯಸನಿಗಳನ್ನು ಮತ್ತು ದುಷ್ಟರು ಪಶ್ಚಾತ್ತಾಪಕ್ಕೆ ಕರ್ತನು ತರುವಂತೆ.

ಸೆಪ್ಟೆಂಬರ್ 13 : ಎಲ್ಲಾ ದೇಶಗಳಲ್ಲಿ ಐಕ್ಯತೆ ಮತ್ತು ಶಾಂತಿಗಾಗಿ.

ಸೆಪ್ಟೆಂಬರ್ 14 : ಯಾವುದೇ ಸಂಧಾನವಿಲ್ಲದೆ ಮತ್ತು ನಿಷ್ಠೆಯಿಂದ ಶುಭಸಂದೇಶವನ್ನು ಸಾರುವ ಕ್ರೈಸ್ತ ಬೋಧಕರಿಗಾಗಿ.

ಸೆಪ್ಟೆಂಬರ್ 15 : ಎಲ್ಲಾ ಕ್ರೈಸ್ತ ಸಂಘ ಸಂಸ್ಥೆಗಳು ಮತ್ತು ಸಭೆಗಳ ಸಂರಕ್ಷಣೆ ಮತ್ತು ದೇವರ ಆಶೀರ್ವಾದಕ್ಕಾಗಿ.

ಸೆಪ್ಟೆಂಬರ್ 16 : ಸೆರೆಮನೆಯಲ್ಲಿ ಸೇವೆ ಸಲ್ಲಿಸುವ ದೇವರ ಸೇವಕರುಗಳಿಗಾಗಿ.

ಸೆಪ್ಟೆಂಬರ್ 17 : ನಮ್ಮ ಹಿರಿಯ ಸಭಾಪಾಲಕರಾದ ಪಾ. ಎಸ್. ಟಿಸ್ಯಾಮ್ ಸೆಲ್‌ರಾಜ್ ಅವರ ವಿವಿಧ ಸೇವೆಗಳಿಗಾಗಿ ಮತ್ತು ಅವರ ತಾಜಾ ದರ್ಶನಕ್ಕಾಗಿ.

ಸೆಪ್ಟೆಂಬರ್ 18 : ನಮ್ಮ ಹಿರಿಯ ಸಭಾಪಾಲಕರಾದ ಪಾ.ಎಸ್.ಸ್ಯಾಮ್ ಸೆಲ್ವರಾಜ್ ಮತ್ತು ಕುಟುಂಬದ ಸಂರಕ್ಷಣೆ ಮತ್ತು ಎಲ್ಲಾ ದುಷ್ಟಶಕ್ತಿಗಳಿಂದ ರಕ್ಷಿಸುವಂತೆ.

(4ನೇ ಪುಟದಿಂದ)

## 3. ಜ್ಞಾಪಕವಿರಲಿ : ಚಂಡಮಾರುತವು ಎಲ್ಲಾ ದೋಣಿಗಳನ್ನು ಮುಟ್ಟುತ್ತದೆ.

ಚಂಡಮಾರುತವು ಯೇಸುಕ್ರಿಸ್ತನನ್ನು ಹೊತ್ತು ಹೊಯ್ಯುವ ದೋಣಿಯನ್ನು ಮಾತ್ರ ಹೊಡೆಯಲಿಲ್ಲ. ಇದು ನೀರಿನಲ್ಲಿರುವ ಪ್ರತಿಯೊಂದು ದೋಣಿಯ ಮೇಲೆ ಪರಿಣಾಮ ಬೀರಿತು. ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು ಚಂಡಮಾರುತವನ್ನು ಎದುರಿಸುತ್ತಾರೆ.

ನಮ್ಮ ದೋಣಿಯಲ್ಲಿ ಯೇಸುಕ್ರಿಸ್ತನು ಇದ್ದರೆ ನಾವು ಎಂದಿಗೂ ಬಿರುಗಾಳಿಗಳನ್ನು ಎದುರಿಸುವುದಿಲ್ಲ ಎಂದಲ್ಲ, ಆದರೆ ಇದರ ಅರ್ಥ ಪ್ರತಿಯೊಂದು ಚಂಡಮಾರುತಕ್ಕಿಂತ ನಮ್ಮ ರಕ್ಷಕನು ದೊಡ್ಡವನಾಗಿದ್ದಾನೆ.

ನಮ್ಮ ಬಿರುಗಾಳಿ ಈ ಮೂಲಕ ಬರಬಹುದು.

- ❖ ನಮ್ಮ ಮನೋಭಾವನೆಯ ಹೋರಾಟಗಳು.
- ❖ ಆರ್ಥಿಕ ಒತ್ತಡಗಳು
- ❖ ಕುಟುಂಬದ ಸಂಘರ್ಷಗಳು
- ❖ ಆರೋಗ್ಯದ ಸವಾಲುಗಳು
- ❖ ಆತ್ಮೀಕ ಎದುರಿಸುವಿಕೆಗಳು.

ನಮ್ಮ ಸ್ವಂತ ನೋವಿನ ಮೇಲೆ ಮಾತ್ರ ಕೇಂದ್ರೀಕರಿಸಲು ಮತ್ತು ನಮ್ಮ ಸುತ್ತಲಿನ ಸಣ್ಣ ದೋಣಿಗಳನ್ನು ಮರೆತು ಬಿಡಲು ಸೈತಾನನು ಬಿರುಗಾಳಿಯನ್ನು ಬಳಸುತ್ತಾನೆ.

ಅವನು ನಮ್ಮನ್ನು ಮುಳುಗಿಸಲು ಬಯಸುತ್ತಾನೆ :

- ❖ ಚಿಂತೆ ಮತ್ತು ಮಾನಸಿಕ ಬಾಧೆಗಳು
- ❖ ಕುಟುಂಬದ ಜವಾಬ್ದಾರಿಗಳು.
- ❖ ಹಣಕಾಸಿನ ಸಮಸ್ಯೆಗಳು.
- ❖ ದೈಹಿಕ ಬಲಹೀನತೆಗಳು.
- ❖ ಆತ್ಮೀಕ ಸುಸ್ತು

ನಮ್ಮ ಸ್ವಂತ ಹೋರಾಟಗಳಿಂದ ನಾವು ಸಂಪೂರ್ಣವಾಗಿ ಸೇವಿಸಿದಾಗ, ನಮ್ಮ ಪ್ರಾರ್ಥನೆ, ಪ್ರೋತ್ಸಾಹ, ಸಹಾನುಭೂತಿ ಮತ್ತು ಸಾಕ್ಷಿಯ ಅಗತ್ಯ ವಿರುವುದನ್ನು ಗಮನಿಸಲು ನಾವು ವಿಫಲವಾಗುತ್ತೇವೆ.

ಆದರೆ ಬಿರುಗಾಳಿಯ ಮೇಲೆ ಎದ್ದೇಳಬೇಕೆಂದು ದೇವರು ನಮ್ಮನ್ನು ಕರೆಯುತ್ತಾನೆ.

*ಯೆಶಾಯ **40:31** ಪ್ರಕಟಿಸುತ್ತದೆ :*

ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು, ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು (ಏರುವವರು) ಓಡಿ ದಣಿಯರು, ನಡೆದು ಬಳಲರು. ನೀವು ಏಕಾಂಗಿಯಾಗಿ ಕಣಿವೆಯ ಮೂಲಕ ನಡೆಯುತ್ತಿರುವಂತೆ ನಿಮಗೆ ಅನಿಸಬಹುದು, ಹೊರಲು ತುಂಬಾ ಭಾರವಾದ ಹೊರೆಗಳನ್ನು ಹೊತ್ತುಕೊಂಡು, ಚಂಡಮಾರುತದಿಂದ ಪಾರಾಗಲು ಬಯಸುತ್ತೀರಿ. ಆದಾಗ್ಯೂ ನಿಮ್ಮನ್ನು ಕರೆಯುವಾತನು ನಂಬಿಗಸ್ತನಾಗಿರುವನು.

ಇಂದು ನೀವು ಎದುರಿಸುತ್ತಿರುವ ಚಂಡಮಾರುತವು ನಿಮ್ಮ ಪ್ರಯಾಣವನ್ನು ವೀಕ್ಷಿಸುತ್ತಿರುವ ಅಸಂಖ್ಯಾತ ಪುಟ್ಟ ದೋಣಿಗಳಿಗೆ ಭರವಸೆ ಮತ್ತು ಸ್ವಾತಂತ್ರ್ಯವನ್ನು ತರುವ ಸಾಕ್ಷಿಯಾಗಬಹುದು.

ಈಗ ನೀವು ಹೋರಾಡುವ ಯುದ್ಧದ ಅನುಭವವು, ದೇವರು ಇತರರಿಗೆ ಆಶೀರ್ವಾದವಾಗಿ ರೂಪಾಂತರ ಗೊಳಿಸಬಹುದು. ನೀವು ಎಂದಿಗೂ ತಿಳಿದಿಲ್ಲದಿರುವವರು ಸಹ.

ಧೈರ್ಯವಾಗಿರಿ

ನಿಮ್ಮ ದೋಣಿಯಲ್ಲಿ ಯೇಸು ಕ್ರಿಸ್ತನನ್ನು ಹೊಂದಿರುವುದರ ಅರ್ಥವನ್ನು ಚಿಕ್ಕ ದೋಣಿಗಳಿಗೆ ತೋರಿಸಿರಿ.

## 4. ಚಂಡಮಾರುತದಲ್ಲಿ ನಿಮ್ಮ ಪ್ರತಿಕ್ರಿಯೆಯು ಚಿಕ್ಕ ದೋಣಿಗಳಿಗೆ ಪರಿಣಾಮ ಬರುತ್ತದೆ!

ಶಿಷ್ಯರು ಗಾಬರಿಯಾಗಿ ಕೂಗಿಕೊಂಡಾಗ :

"ಗುರುವೇ ನಾವು ಮುಳುಗಿ ಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ?" ಅವರ ಸುತ್ತಮುತ್ತಲಿರುವ ಸಣ್ಣದೋಣಿಗಳು ಭಯದಿಂದ ತುಂಬಿರಬಹುದು.

ಯೇಸುಕ್ರಿಸ್ತನನ್ನು ಹೊತ್ತುಕೊಂಡು ಹೋಗುವ ದೋಣಿಯು ಭಯದಿಂದ ನಡುಗುತ್ತಿರುವಾಗ, ಬೇರೆಯವರಿಗೆ ಇನ್ನಾವ ನಿರೀಕ್ಷೆ ಇರುತ್ತದೆ?

ಬಿಕ್ಕಟ್ಟಿನಲ್ಲಿ ನಿಮ್ಮ ಪ್ರತಿಕ್ರಿಯೆಯು ಆರಾಮದ ಸಮಯದಲ್ಲಿ ನಿಮ್ಮ ಮಾತುಗಳಿಗಿಂತ ಹೆಚ್ಚಾಗಿ ಜೋರಾಗಿ ಮಾತನಾಡುತ್ತದೆ.

ನಿರೀಕ್ಷೆ ಇಲ್ಲದವರ ತರಹ ಈ ರೀತಿಯಾಗಿ ನೀವು ಪ್ರತಿಕ್ರಿಯಿಸುತ್ತೀರಾ? ಅಥವಾ ಬಿರುಗಾಳಿಯಲ್ಲಿ ನಿಮ್ಮ ಜೊತೆಯಲ್ಲಿರುವವನನ್ನು ನೀವು ಪ್ರಕಟಿಸುತ್ತೀರಾ?

ಮೂರು ಇಬ್ರಿಯ ಯೌವ್ವನಸ್ಥರು ಪ್ರಕಟಿಸಿದರು.

ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು. (ದಾನಿಯೇಲ್ 3:17-18)

ಎಂಥ ಶಕ್ತಿಯುಳ್ಳ ಅನುಭವವುಳ್ಳ ನಂಬಿಕೆ. ಆತನು ಬಿಡಿಸದೆ ಹೋದರೆ ನಾವು ಅಂತಹ ನಂಬಿಕೆಯನ್ನು ಹೊಂದಿದ್ದೇವೆಯೋ ಅದು ಸಂದರ್ಭಗಳನ್ನು ಮಾತ್ರ ಅವಲಂಬಿಸಿಲ್ಲ, ದೂರದಿಂದ ನೋಡುವ ಪ್ರತಿಯೊಂದು ಚಿಕ್ಕ ದೋಣಿಯನ್ನು ಬಲಪಡಿಸುವ ನಂಬಿಕೆ?

*ಪೌಲನು ಪ್ರಕಟಿಸುತ್ತಾನೆ:*

ನಾನು ನಂಬಿರುವವನನ್ನು ನಾನು ಬಲ್ಲೆನು. 2 ತಿಮೊಥಿ 1:12

ಚಂಡಮಾರುತದ ಸಮಯದಲ್ಲಿ ನಿಮ್ಮ ನಂಬಿಕೆಯು ಬೇರೆಯವರ ಶಕ್ತಿಯಾಗಿ ಪರಿವರ್ತನೆಯಾಗುತ್ತದೆ.

## 5. ಜ್ಞಾಪಕವಿರಲಿ – ಚಿಕ್ಕ ದೋಣಿಗಳು ನಿಮ್ಮ ಬಿಡುಗಡೆಯ ಮೇಲೆ ನೆರವಾಗಿವೆ.

ಯೇಸುಕ್ರಿಸ್ತನು ಬಿರುಗಾಳಿಯನ್ನು ನಿಲ್ಲಿಸಿದಾಗ, ಆತನ ಸುತ್ತಲಿರುವ ಪ್ರತಿಯೊಂದು ಚಿಕ್ಕದೋಣಿಗಳು ಆತನ ಶಕ್ತಿಯ ಪರಿಣಾಮವನ್ನು ಅನುಭವಿಸಿದವು. ಈ ಅದ್ಭುತ ಕಾರ್ಯವು ಕೇವಲ ಶಿಷ್ಯರಿಗೆ ಮಾತ್ರವಲ್ಲ, ಅದರ ಸುತ್ತಲಿರುವ ಪ್ರತಿಯೊಂದು ದೋಣಿಗೆ ಶಾಂತಿಯನ್ನು ತಂದಿತು.

(8ನೇ ಪುಟಕ್ಕೆ)

NEHEMIAH BIBLE COLLEGES,
Rush for Admission!
Chepauk, Santhoshapuram & Velachery Chennai.
Diploma in Theology & Bachelor of Theology
Medium :Tamil (Part Time)
Hindi (Part Time)
Qualification : 10th Standard & above
Recognised by International Christian Leaders & Senior Pastors for the past 56 years
Contact :
The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikaans.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Branch Churches: Santhoshapuram, Balaji Nagar & Velachery
7. Great Commission Partners (Network of Pastors)
8. Training Programmes – Seminars & Retreats
9. Crusades
10. Literature Distribution and Follow Up
11. Gospel Printing Press - Publications
12. St. Paul's Matriculation School - Village English High School
13. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
14. **Early Morning Service : 5.30 a.m. Sunday**
15. **Preliminary Service : 8.00 a.m. Sunday**
16. **Tamil Service : 8.30 a.m. Sunday**
17. **Youth Meeting : 11.00 a.m. Sunday**
18. **Fellowship Lunch : 1.00 p.m. Sunday**
19. **Telugu Service : 4.00 p.m. Sunday**
20. **Hindi Service : 5.00 p.m. Sunday**
21. **Tamil & English Service : 6.00 p.m. Sunday**
22. Feedback Time : 7.30 p.m. Sunday
23. Women's Prayer : 5.30 p.m. Wednesday
24. Hindi Prayer : 7.00 p.m. Wednesday
25. Men's Prayer : 7.30 p.m. Friday
26. Discipleship Meeting : 6.00 p.m. Saturday
27. House Meetings : 6.30 p.m. Tuesday & Thursday
28. Special Holy Communion : 6.00 a.m. 1st day of each month
29. Ministers' Meeting : 5.30 p.m. First Saturday
30. Parents' Prayer : 4.00 p.m. First Sunday
31. Night Prayer : 9.30 p.m. Third Friday
32. Fasting Prayer : 9:30 a.m. Second Saturday
33. Holy Communion : Second Sunday Service
34. Youth / Kid Prayer : 10.00 p.m. daily (over phone)
35. Staff Devotion : 9.00 a.m. daily
36. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
Echo of His Call, **Post Box 2957**
CHEPAUK, CHENNAI - 600 005.

**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | |
|---|---|
| **Account Name** | : **ECHO OF HIS CALL EDUCATIONAL TRUST** |
| **Account Number** | : **1023 2923 805** |
| **Bank Name** | : **STATE BANK OF INDIA** |
| **Branch** | : **TRIPLICANE, CHENNAI - 600 005** |
| **IFSC Code** | : **SBIN 0000249** |
| **SWIFT Code** | : **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ **24:15**)

## ನನ್ನ ಕೀಳು ಸ್ಥಿತಿಯನ್ನು ಪರಿಗಣಿಸಿದ ಕರ್ತನು!

## ನೀವು ನೂರರಷ್ಟು ಪಡೆದುಕೊಳ್ಳುತ್ತೀರಿ ಮತ್ತು ನಿತ್ಯಜೀವನವನ್ನು ಅನುವಂಶಿಕವಾಗಿ ಪಡೆದುಕೊಳ್ಳಿರಿ.


*ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ* ಇರುವುದಿಲ್ಲ. ಪ್ರಸಂಗಿ 9:10

*ಗಾಳಿಯನ್ನು ನೋಡುತ್ತಲೇ ಇರುವವನು ಬೀಜ ಬಿತ್ತನು; ಮೋಡಗಳನ್ನು ಗಮನಿಸುತ್ತಲೇ ಇರುವವನು ಪೈರನ್ನು ಕೊಯ್ಯನು.* ಪ್ರಸಂಗಿ 11:4

ಸತ್ಯವೇದ ಪತ್ರ ವ್ಯವಹಾರ ಕೋರ್ಸ್‌ಗಳು ಮತ್ತು ಸತ್ಯವೇದ ಕಾಲೇಜುಗಳ ಮೂಲಕ ಎಲ್ಲಾ ವರ್ಗದ ಜನರಿಗೆ ಸತ್ಯವೇದದ ಆಳವಾದ ಸತ್ಯಗಳನ್ನು ಕಲಿಸುವುದು ನನ್ನ ಬಯಕೆಯಾಗಿತ್ತು. ಈ ಒಂದು ಭಾರವು ನನ್ನ ಹೃದಯದಲ್ಲಿ ಆಳವಾಗಿ ಬೇರೂರಿತ್ತು, ವರ್ಷಗಳಲ್ಲಿ ಬಲವಾಗಿ ಬೆಳೆಯುತ್ತಲೇ ಇತ್ತು. ಆದಾಗ್ಯೂ, ನಾನು ಅಸಹಾಯಕನಾಗಿದ್ದೆನು. ನನಗೆ ಆದಾಯದ ಮೂಲವಾಗಿ ಅಥವಾ ಈ ದರ್ಶನದಲ್ಲಿ ನನಗೆ ಮಾರ್ಗದರ್ಶನ ನೀಡಲು ಮತ್ತು ಸಹಾಯ ಮಾಡಲು ಯಾರೂ ಇರಲಿಲ್ಲ. ಆ ಒಂದು ಸಮಯದಲ್ಲಿ, ನಾನು ಮತ್ತು ನನ್ನ ಕುಟುಂಬವು ಬಡತನದಲ್ಲಿ ಇತ್ತು. ಅತ್ಯಂತ ಕಡಿಮೆ ಸೌಲಭ್ಯಗಳಲ್ಲಿರುವ ಚಿಕ್ಕ ಮನೆಯಲ್ಲಿ ಬಹಳ ಕಷ್ಟವನ್ನು ಸಹಿಸಿಕೊಂಡೆವು.



1980ರಲ್ಲಿ, ಭಾರತೀಯ ಸತ್ಯವೇದ ಸಾಹಿತ್ಯ (ಐಬಲ್) ಸಂಸ್ಥೆಯಿಂದ ಒಂದು ಸುವಾರ್ತೆ ಪಾಕೆಟ್‌ನ್ನು ಸ್ವೀಕರಿಸಿದೆನು. ಅದನ್ನು ನಾನು ತೆಗೆದು ನೋಡಿದಾಗ, ಅದರಲ್ಲಿ ಅನೇಕ ಸುವಾರ್ತೆ ಕರಪತ್ರಗಳು ಇದ್ದವು ಮತ್ತು ಪತ್ರವ್ಯವಹಾರದ ಕೋರ್ಸ್‌ಗಳ ಮಸ್ತಕವಿತ್ತು. ಅದನ್ನು ನಾನು ಸಂಪೂರ್ಣವಾಗಿ ಓದಿದಾಗ, ಭಾರತದಾದ್ಯಂತ ವಿವಿಧ ಭಾಷೆಗಳಲ್ಲಿ ಜನರನ್ನು ತಲುಪಲು ಒಂದೇ ರೀತಿಯ ವಸ್ತುಗಳನ್ನು ಬಳಸುವುದರಲ್ಲಿ ನಾನು ಆಳವಾಗಿ ಆಸಕ್ತಿ ಹೊಂದಿದೆನು. ತಡಮಾಡದೆ, ಚೆನ್ನೈನ ಸಾವಿರ ದೀಪಗಳಲ್ಲಿ ಇರುವ ಭಾರತೀಯ ಸತ್ಯವೇದ ಸಾಹಿತ್ಯ ಸಂಸ್ಥೆಯ ಕಛೇರಿಗೆ ನನ್ನ ಹಳೆಯ ಸೈಕಲ್‌ನ್ನು ತೆಗೆದುಕೊಂಡು ಹೋದೆನು.



ಅಲ್ಲಿ ನಾನು ಸಹೋದರ ವೇಲ್ ಎಂಬ ಒಬ್ಬ ಯೌವ್ವನಸ್ಥನನ್ನು ಭೇಟಿಯಾದೆನು. ಈಗ ಕಾರ್ಯನಿರ್ವಾಹಕ ಸಲ್ಲಿಸುತ್ತಿರುವ ಶ್ರೀ ವೇಲಾಯುಧಮ್ ಎಂದು ಕರೆಯುತ್ತಾರೆ. ಅತನನ್ನು ಎಚ್ಚರಿಕೆಯಿಂದ ಪ್ಯಾಕ್ ಮಾಡಿ ಪತ್ರವ್ಯವಹಾರದ ಕೋರ್ಸ್‌ಗಳ ಮಸ್ತಕಗಳನ್ನು ಕಳುಹಿಸುವುದನ್ನು ನೋಡುವುದು ದೇವರ ಮಹಿಮೆಗಾಗಿ ಇದೇ ರೀತಿಯ ಕೆಲಸವನ್ನು ಮಾಡಲು ನನ್ನನ್ನು ಪ್ರೇರೇಪಿಸಿತು.

ಬಹಳ ಮಾರ್ಯಾದೆಯಿಂದ ಅವರನ್ನು ನಾನು ಸಂಧಿಸಿದೆನು. ಕೆಲವು ಕೋರ್ಸ್‌ಗಳ ಮಸ್ತಕಗಳನ್ನು ನನಗೆ ಒದಗಿಸಬಹುದಾ ಎಂದು ನಾನು ಕೇಳಿದೆನು. ಪ್ರತಿಯೊಂದು ಮಸ್ತಕ ಬೆಲೆ 50ಪೈಸೆ ಎಂದು ಅವರು ನನಗೆ ತಿಳಿಸಿದರು. ನಾನು ಬಡ ಕುಟುಂಬದಿಂದ ಬಂದಿದ್ದೇನೆ ಎಂದು ಅವರಿಗೆ ವಿವರಿಸಿದೆನು. ನಾನು ಮಾಸಿಕ ಸಂಬಳದೊಂದಿಗೆ ಸರ್ಕಾರಿ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದೆ. ತನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಬಹಳ ಉದಾರವಾಗಿ 10 ಮಸ್ತಕಗಳನ್ನು ನನಗೆ ಉಚಿತವಾಗಿ ಕೊಟ್ಟರು.

ಆದಾಗ್ಯೂ, ನಾನು ಸಂತೃಪ್ತನಾಗಲಿಲ್ಲ. ಕಳುಹಿಸುವ ಹಾಲ್‌ನೊಳಗೆ ಜೋಡಿಸಲಾದ ಅನೇಕ ಮಸ್ತಕಗಳನ್ನು ನಾನು ಕಿಟಕಿಯ ಮೂಲಕ ನೋಡಿದೆನು. ಅವುಗಳನ್ನು ನನ್ನನ್ನು ಕರೆದ ಹಾಗೆ, ಅವುಗಳನ್ನು ತೆಗೆದುಕೊಂಡು ಕ್ರಿಸ್ತನ ಜ್ಞಾನದ ಅಗತ್ಯವಿರುವವರ ಕೈಗೆ ಕೊಡುವಂತೆ ನನ್ನನ್ನು ಒತ್ತಾಯಿಸುತ್ತಿರುವಂತೆ ತೋರುತ್ತಿದೆ. ನನಗೆ ಹೊರಡಲ್ ಸಾಧ್ಯವಾಗಲಿಲ್ಲ.

ಕೆಲವು ಸಮಯದ ನಂತರ, ಇನ್ನೊಬ್ಬ ಸಂಭಾವಿತ ವ್ಯಕ್ತಿ ನನ್ನ ಬಳಿಗೆ ಬಂದು ಕೇಳಿದರು, ನೀನು ಯಾರು ಮತ್ತು ನೀನು ಯಾಕೆ ಇಲ್ಲಿ ನಿಂತು ನಮ್ಮ ಕಛೇರಿಯನ್ನು ಇಷ್ಟು ಹೊತ್ತು ನೋಡುತ್ತಾ ಇದ್ದೀಯಾ? ನಾನು ಜೀವಂತ ದೇವರಾದ ಯೇಸುಕ್ರಿಸ್ತನ ಸೇವೆಯನ್ನು ಸಲ್ಲಿಸುವ ಅಪೇಕ್ಷೆಯನ್ನು ಹೊಂದಿರುವ ಸೀಮಿತ ಸಾಮರ್ಥ್ಯದ ವ್ಯಕ್ತಿ ಎಂದು ನಾನು ಅವರಿಗೆ ವಿವರಿಸಿದೆನು. ನಾನು ಹೆಚ್ಚು ಪತ್ರವ್ಯವಹಾರದ ಕೋರ್ಸ್ ಮಸ್ತಕಗಳನ್ನು ಪಡೆಯಲು ಬಯಸುತ್ತೇನೆ. ನಾನು ಅಗತ್ಯವಾದ ಹಣವನ್ನು ತಂದಿದ್ದರೆ ನಾನು ಅವುಗಳನ್ನು ನಿನಗಾಗಿ ಖರೀದಿಸಬಹುದು ಎಂದು ಅವರು ನನಗೆ ಹೇಳಿದರು.

ಆ ಒಂದು ಸಮಯದಲ್ಲಿ, ಕಷ್ಟಕರವಾದ ತೀರ್ಮಾನವನ್ನು ನಾನು ಮಾಡಿದೆನು. ನನ್ನ ಹಳೆಯ ಸೈಕಲ್‌ನ್ನು ಮಾರುವುದಕ್ಕೆ ಆರಿಸಿಕೊಂಡೆನು. ಅದು ನನ್ನ ಏಕೈಕ ಆಸ್ತಿ ಮತ್ತು ಸಾರಿಗೆ ಸಾಧನವಾಗಿತ್ತು.




ತಕ್ಷಣವೇ ನಾನು ಹತ್ತಿರ ಇರುವ ಹಳೆಯ ಸೈಕಲ್‌ನ್ನು ದುರಸ್ತಿ ಮಾಡುವ ಅಂಗಡಿಗೆ ಹೋದೆನು. ನೂರು ರೂಪಾಯಿಗಳಿಗೆ ಅದನ್ನು ಮಾರಿದೆನು. 100 ಪತ್ರವ್ಯವಹಾರ ಕೋರ್ಸ್‌ಗೆ ಮಸ್ತಕಗಳನ್ನು ಕೊಂಡುಕೊಂಡೆನು. ನನಗೆ ಇದ್ದ ಒಂದೇ ಒಂದು ಸಾರಿಗೆ ಸಾಧನವನ್ನು ಬಿಟ್ಟುಕೊಟ್ಟೆನು. ನನ್ನ ಭುಜದ ಮೇಲೆ ಮಸ್ತಕಗಳನ್ನು ಹೊತ್ತುಕೊಂಡು ಸುಮಾರು 5 ಕಿಲೋಮೀಟರ್ ದೂರ ಸಾವಿರ ದೀಪಗಳಿಂದ ನನ್ನ ಮನೆಗೆ ನಡೆದುಕೊಂಡು ಹೋದೆನು.



ಅಂತಹ ಭಾರವನ್ನು ಹೊರುವ ಅಭ್ಯಾಸವಿಲ್ಲದ ನಾನು ಶೀಘ್ರದಲ್ಲೆ ದಣಿದೆನು. ಎರಡು ಸಂದರ್ಭಗಳಲ್ಲಿ, ಮಸ್ತಕಗಳು ನನ್ನ ಹೆಗಲಿನಿಂದ ಜಾರಿ ರಸ್ತೆಗೆ ಬಿದ್ದವು. ನಾನು

ಅಸಹಾಯಕನಾದೆನು. ನನ್ನ ಹೋರಾಟದ ಸಮಯದಲ್ಲಿ ಕೆಲವರು ನನ್ನನ್ನು ಅಪಹಾಸ್ಯ ಮಾಡಿ ಅವಮಾನಿಸಿದರು. ಏನೇ ಆಗಲಿ, ದೇವರ ಕೃಪೆಯಿಂದ, ನಾನು ಸುರಕ್ಷಿತವಾಗಿ ಮನೆಗೆ ತಲುಪಿದೆ ಮತ್ತು ನನ್ನ ಎಲ್ಲಾ ಶಕ್ತಿಯಿಂದ ಪುಸ್ತಕಗಳನ್ನು ವಿತರಿಸಲು ಪ್ರಾರಂಭಿಸಿದೆ.

ಸಹೋದರ ದಿವಂಗತ ಪೌಲ್‌ರಾಜ್ ಎಂ. ಪೌಲ್‌ರಾಜ್‌ರವರ ಸಹಾಯ ದಿಂದ, ದೇವರ ಶಕ್ತಿಯಿಂದ ನಿಮಗಾಗಿ ಹೊಸಜೀವನ! ಎಂಬ ಪತ್ರವ್ಯವಹಾರದ ಕೋರ್ಸ್‌ನ್ನು ಪ್ರಾರಂಭಿಸಿದೆನು. ನಂತರ, ಆತನ ಕರೆಯ ಪ್ರತಿಧ್ವನಿಯ ನೆಹಮೀಯ ಸಾಯಂಕಾಲ ಸತ್ಯವೇದ ಕಾಲೇಜು ಅನ್ನು ನಾವು ಸ್ಥಾಪಿಸಿದೆವು.



ಹೌದು ನನ್ನ ಪ್ರಿಯ ಸ್ನೇಹಿತನೇ, ದೇವರ ರಾಜ್ಯಕ್ಕಾಗಿ ಹಳೆಯ ಸೈಕಲ್ ನೊಂದಿಗೆ ನಾನು ಭಾಗವಾಗಬೇಕಾದ ಸಮಯವಿತ್ತು. ನನ್ನ ಕುಟುಂಬದವರು ಮತ್ತು ಸ್ನೇಹಿತರು ಇದು ಮೂರ್ಖತನ ಮತ್ತು ಅಜ್ಞಾನದ ಕ್ರಿಯೆ ಎಂದು ಪರಿಗಣಿಸಿದರು. ಆ ನಿರ್ಧಾರದಿಂದ ನನಗೆ ತುಂಬಾ ಅವಮಾನವಾಯಿತು. ಆದರೆ ಈ ಹೊತ್ತು, ದೇವರು ನನಗೆ ಅನೇಕ ವಾಹನಗಳನ್ನು ಕೊಟ್ಟು ಆಶೀರ್ವದಿಸಿದ್ದಾನೆ. ನನ್ನ ಸೇವೆಗೆ ಸಹಾಯ ಮಾಡುವುದಕ್ಕೆ ನಂಬಿಕೆಯ ಕೆಲಸಗಾರರನ್ನು ಕೊಟ್ಟಿದ್ದಾನೆ. ನಾನು ವೈಯಕ್ತಿಕವಾಗಿ ಸುವಾರ್ತೆ ಸಾಹಿತ್ಯವನ್ನು ನನ್ನ ಹೆಗಲ ಮೇಲೆ ಮತ್ತು ತಲೆಯ ಮೇಲೆ ಹೊತ್ತುಕೊಂಡ ಸಮಯವು ಇತ್ತು. ನನ್ನ ನೋವಿನ ಮತ್ತು ಯೌವ್ವನದಲ್ಲಿ ಅವಮಾನಕರವಾದ ಅನುಭವ. ಆದರೆ, ನನ್ನನ್ನು ತೆಗೆದುಕೊಂಡು ಹೋಗುವುದಕ್ಕೆ ಮತ್ತು ಸುವಾರ್ತೆಯ ಸಾಮಾನುಗಳನ್ನು ಮತ್ತು ಸೇವೆಯ ಕೆಲಸಗಾರರನ್ನು ತೆಗೆದುಕೊಂಡು ಹೋಗುವುದಕ್ಕೆ ಈ ಹೊತ್ತು ದೇವರು ನನಗೆ ಕಾರುಗಳನ್ನು ಮತ್ತು ಮಿನಿಬಸ್ಸುಗಳನ್ನು ಕೊಟ್ಟಿದ್ದಾನೆ.

ಪ್ರೀತಿಯ ಸ್ನೇಹಿತನೇ, ದೇವರು ನಿಮ್ಮ ಜೀವಿತಕ್ಕೆ ಮತ್ತು ನಿಮ್ಮ ಭವಿಷ್ಯಕ್ಕೆ ವಿಶೇಷವಾದ ಯೋಜನೆಯನ್ನು ಇಟ್ಟಿದ್ದಾನೆ. ನಿಮಗೆ ಇನ್ನೂ ಸಮಯವಿದೆ. ಆತನ ರಾಜ್ಯಕ್ಕಾಗಿ ನೀವು ಕರ್ತನಿಗೆ ಏನನ್ನು ಒಪ್ಪಿಸುತ್ತೀರೋ ಅದು ಎಂದಿಗೂ ವ್ಯರ್ಥವಾಗುವುದಿಲ್ಲ. ಯೇಸುಕ್ರಿಸ್ತನನ್ನು ಉದಾಹರಣೆಗೆ ತೆಗೆದುಕೊಳ್ಳಿರಿ. ರಾಜ್ಯಕೇಂದ್ರಿತ ದರ್ಶನದೊಂದಿಗೆ ಆತನ ಸೇವೆಯಲ್ಲಿ ಅಮೂಲ್ಯವಾದದ್ದನ್ನು ಹೂಡಿಕೆ ಮಾಡಿ. ನಿಮ್ಮ ಜೀವನದ ಮೇಲೆ ದೇವರ ಆಶೀರ್ವಾದವು ಅಂತ್ಯವನ್ನು ತಿಳಿಯುವುದಿಲ್ಲ.

ಜ್ಞಾಪಕವಿರಲಿ :

*ಒಂದೇ ಒಂದು ಜೀವಿತವು ಅದು ಬೇಗನೆ ನಶಿಸಿ ಹೋಗುವುದು;*
*ಯೇಸು ಕ್ರಿಸ್ತನಿಗಾಗಿ ನೀವು ಏನು ಮಾಡುತ್ತೀರೋ ಅದು ಶಾಶ್ವತವಾಗಿ ಉಳಿಯುವುದು !*

*************

(6ನೇ ಪುಟದಿಂದ)

ಪ್ರೀತಿಯ ಸಹೋದರ ಮತ್ತು ಸಹೋದರಿಯರೆ, ಕೆಲವು ಸಾರಿ ಸಮಸ್ಯೆಗಳು, ಚಂಡಮಾರುತ, ಸಂಕಷ್ಟಗಳ ಮೂಲಕ ಹಾದುಹೋಗುವದಕ್ಕೆ ದೇವರು ಅನುವು ಮಾಡುತ್ತಾನೆ. ಅನಿರೀಕ್ಷಿತ ಋತುಗಳು ಯಾಕೆಂದರೆ ಇತರರಿಗೆ ನಿರೀಕ್ಷೆಯನ್ನು ತರಲು ನಮ್ಮ ವಿಮೋಚನೆಯನ್ನು ಬಳಸಲು ಆತನು ಉದ್ದೇಶಿಸುತ್ತಾನೆ.

ನಿಮ್ಮ ಪ್ರಗತಿಯು ಇನ್ನೊಬ್ಬರ ಆಶೀರ್ವಾದ ವಾಗಬಹುದು.

ನಿಮ್ಮ ಪ್ರಾರ್ಥನೆಗಳು ಬೇರೆಯ ವ್ಯಕ್ತಿಗೆ ಬಾಗಿಲುಗಳು ತೆರೆಯಬಹುದು.

ನಿಮ್ಮ ಪರಿಶ್ರಮವು ಮೌನವಾಗಿ ಹೋರಾಡುತ್ತಿರುವ ವ್ಯಕ್ತಿಯನ್ನು ಬಲಪಡಿಸುತ್ತದೆ.

ಕೆಲವೊಮ್ಮೆ ದೇವರು ನಮಗೆ ಬಿರುಗಾಳಿಗಳ ಮೂಲಕ ಹಾದುಹೋಗಲು ಅನುವು ಮಾಡಿಕೊಡುತ್ತಾನೆ. ಇದರಿಂದಾಗಿ ನಮ್ಮ ಸಾಕ್ಷಿಯು ಸ್ವಾತಂತ್ರ್ಯದ ಮತ್ತೊಂದು ವ್ಯಕ್ತಿಗೆ ದಾರಿಯಾಗುತ್ತದೆ. ಪೌಲ್ ಮತ್ತು ಸೀಲ್‌ರನ್ನು ಜ್ಞಾಪಕ ಮಾಡಿಕೊಳ್ಳಿರಿ. ಅವರು ಸೆರೆಮನೆಯಲ್ಲಿ ಸರಪಳಿಗಳಲ್ಲಿ ಇರುವಾಗ, ಅವರು ಹತಾಶೆಗೆ ಶರಣಾಗಲಿಲ್ಲ. ಬದಲಾಗಿ, ಅವರ ತಮ್ಮ ಸ್ವರಗಳನ್ನು ಎತ್ತಿ ಆರಾಧನೆಯನ್ನು ಮಾಡಿದರು.

ಸತ್ಯವೇದವು ಹೇಳುತ್ತದೆ :

ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥನೆ ಮಾಡುವವರಾಗಿ ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು. ಸೆರೆಯಲ್ಲಿದ್ದವರು ಲಕ್ಷ್ಯವಿಟ್ಟು ಕೇಳುತ್ತಿದ್ದರು. ಆಕಸ್ಮಾತ್ತಾಗಿ ಮಹಾ ಭೂಕಂಪವುಂಟಾಯಿತು; ಸೆರೆಮನೆಯ ಅಸ್ತಿವಾರಗಳು ಕದಲಿದವು. ಅದೇ ಕ್ಷಣದಲ್ಲಿ ಕದಗಳೆಲ್ಲಾ ತೆರೆದವು. ಅಪೊಸ್ತಲ್ 16:25.

ಭಯ, ಸುಳ್ಳು ಮತ್ತು ಶತ್ರುಗಳ ತಂತ್ರಗಳಿಂದ ಸಿಕ್ಕಿಬಿದ್ದಿರುವ ನಿಮ್ಮ ಸುತ್ತಲಿನ ಜನರು ನಿಮ್ಮ ಬಿರುಗಾಳಿಗಳ ಮೂಲಕ ನಡೆಯುವಾಗ ಕೇಳುತ್ತಾರೆ.

ಅವರು ಏನನ್ನು ಕೇಳುತ್ತಾ ಇದ್ದಾರೆ?

ಅವರು ಆರಾಧನೆಯನ್ನು, ನಂಬಿಕೆ ಮತ್ತು ವಿಜಯವನ್ನು ಕೇಳುತ್ತಾ ಇದ್ದಾರೆ? ಅಥವಾ ಭಯ, ದೂರು ಮತ್ತು ನಿರಾಶೆಯನ್ನು ಕೇಳುತ್ತಾರೆ?

ನಂತರ ತಕ್ಷಣವೇ: **ಆಕಸ್ಮಾತ್ತಾಗಿ ಮಹಾ ಭೂಕಂಪವುಂಟಾಯಿತು; ಸೆರೆಮನೆಯ ಅಸ್ತಿವಾರಗಳು ಕದಲಿದವು. ಅದೇ ಕ್ಷಣದಲ್ಲಿ ಕದಗಳೆಲ್ಲಾ ತೆರೆದವು. ಎಲ್ಲರ ಬೇಡಿಗಳು ಕಳಚಿ ಬಿದ್ದವು.** ಅಪೋಸ್ತ 16:26.

ನನ್ನ ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ಒಂದು ಮಾತನ್ನು ಗಮನಿಸಿ ಎಲ್ಲರೂ.

ಕೇವಲ ಪೌಲ್ ಸೀಲ್‌ರು ಮಾತ್ರ ಅಲ್ಲ, ಎಲ್ಲರೂ ಬಿಡುಗಡೆ ಹೊಂದಿದರು. ಜೊತೆ ಸೆರೆಯವರು ಅವರು ಹತ್ತಿರವಿದ್ದವರು, ಗೊತ್ತಿದ್ದವರು ಮತ್ತು ಗೊತ್ತಿಲ್ಲದವರು ಬಿಡುಗಡೆಯನ್ನು ಅನುಭವಿಸಿದರು ಯಾಕೆಂದರೆ ಇಬ್ಬರು ಸೇವಕರು ದುಃಖದ ಮಧ್ಯದಲ್ಲಿ ಆರಾಧನೆಯನ್ನು ಆರಿಸಿಕೊಂಡರು.

ಅದು ದೇವರ ಕೃಪೆಯ ಶಕ್ತಿಯಾಗಿದೆ.

ನಿಮ್ಮ ಆರಾಧನೆಯು ಸರಪಳಿಗಳನ್ನು ಬಿಡುಗಡೆಗೊಳಿಸುವ ಕೀಲಿಯಾಗಬಹುದು. ಆಮೇನ್!

## ಎಲ್ಲರಿಗೆ ಸ್ವಾತಂತ್ರ್ಯ

ನಾವೆಲ್ಲರೂ ಆತನ ಬಿಡುಗಡೆಯ ಸಾಧನವಾಗಬೇಕೆಂದು ಯೇಸುಕ್ರಿಸ್ತನು ನಮ್ಮೆಲ್ಲರನ್ನು ಕರೆಯುತ್ತಾನೆ. ಸೈತಾನನ ತಂತ್ರಗಳಿಂದ ಒಳಗಾಗಿರುವವರನ್ನು ತಲುಪುವಂತೆ. ಮೋಸ, ಭಯ ಮತ್ತು ಕತ್ತಲು.

ಇನ್ನೂ ಚಿಕ್ಕದೋಣಿಗಳು ನಮ್ಮ ಸುತ್ತಮುತ್ತಲೂ ಇವೆ.

ಅವುಗಳು ನಿರೀಕ್ಷೆಯನ್ನು ಹುಡುಕುತ್ತಾ ಇವೆ.

ಅವುಗಳು ಶಾಂತಿಗಾಗಿ ತವಕಪಡುತ್ತಾ ಇವೆ.

ಅವರು ನಿಜವಾದ ಯೇಸುಕ್ರಿಸ್ತನನ್ನು ನೋಡುವುದಕ್ಕೆ ಕಾಯುತ್ತಾ ಇವೆ.

ನೀನು ಮತ್ತು ನಾನು ಅವರು ಎದುರಿಸುವ ಯೇಸುಕ್ರಿಸ್ತನ ಪ್ರತಿಬಿಂಬವಾಗಿರಬೇಕು.

ಕೇವಲ ನಿಮ್ಮ ಸ್ವಂತ ದೋಣಿಯಲ್ಲಿ ಯೇಸುಕ್ರಿಸ್ತನ ಇರುವಿಕೆಯಲ್ಲಿ ಸಂತೃಪ್ತಿಯಾಗಬೇಡಿ. ನಿಮ್ಮ ಸುತ್ತಲಿರುವ ಚಿಕ್ಕದೋಣಿಗಳಿಗೆ ಆತನ ಅಗತ್ಯವಿದೆ.

ನಮ್ಮ ಸುತ್ತಲಿರುವ ಲಕ್ಷಾಂತರ ಜನರಿಗೆ ಆತನ ಸ್ವಾತಂತ್ರ್ಯವನ್ನು ಕೊಂಡೊಯ್ಯಲು ದೇವರು ನಮ್ಮನ್ನು ಶಕ್ತಗೊಳಿಸಲಿ. ಅವರಲ್ಲಿ ಅನೇಕರನ್ನು ನಾವು ಶಾಶ್ವತತೆಯವರೆಗೂ ಭೇಟಿಯಾಗುವುದಿಲ್ಲ. ಯೇಸುಕ್ರಿಸ್ತ ಉಪಸ್ಥಿತಿಯಿಲ್ಲದೆ ಇನ್ನೂ ಚಿಕ್ಕದೋಣಿಗಳಲ್ಲಿ ಪ್ರಯಾಣಿಸುವವರಿಗೆ ನಿಜವಾದ ಸ್ವಾತಂತ್ರ್ಯ ಹೋರಾಟಗಾರರಾಗಲು ದೇವರು ನಮ್ಮನ್ನು ಕರೆದಿದ್ದಾನೆ.

*ಚಿಕ್ಕದೋಣಿಗಳನ್ನು ಜ್ಞಾಪಕ ಮಾಡಿಕೊಳ್ಳಿರಿ !*

*************

## NOTICE

Save our mobile numbers (+91) 98410 71858, (+91) 98412 71858 (main numbers) in your mobile phones.

- Editor

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

## OUR QR CODE:

ECHO OF HIS CALL

Scan to pay with any UPI app

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

**Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.**

**Annual Subscription : Rs. 100/-** **Life Subscription : Rs. 2000/-**

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

RNI NO. 70107/98
Postal Regn. No. TN/CH/(C)/195/24-26
WPP NO. TN/PMG(CCR)/WPP- 219/24-26
Date of Publication: Second week of every month
Date of Posting : 9th & 10th of every month
Posted at "Egmore RMS Patrika Channel"
on 10th AUGUST 2026.

If un-delivered please return to:

**ECHO OF HIS CALL (KANNADA)**
P.O. Box No. 2957,
Chepauk, Chennai - 600 005, INDIA.
Phone: (+ 91- 44) 2852 8282, 2852 9293, 2854 7766

## *JESUS LOVES YOU!*

To

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**